ಬಾಕಿ ಇರುವ ಕಡತಗಳನ್ನು ಮತ್ತು ಕಾಗದ ಪತ್ರಗಳನ್ನು ವಿಲೇವಾರಿ ಮಾಡುವ ಕುರಿತು.

2212(2787)

ಶ್ರೀ ಗುರುಸ್ವಾಮಿ ಎ.ಎಸ್(ಚಾಮುಂಡೇಶ್ವರಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡತ ವಿಲೇವಾರಿಯು ಸರ್ಕಾರದ ಒಂದು ನೀತಿ(ಪಾಲಿಸಿ)ಯಾಗಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಸಚಿವಾಲಯದ, ಇಲಾಖಾ ಮುಖ್ಯಸ್ಥರುಗಳ, ಜಿಲ್ಲಾಧಿಕಾರಿಗಳ ಜಿಲ್ಲಾ ಪಂಚಾಯತ್, ಇತ್ಯಾದಿ ಮಟ್ಟದಲ್ಲಿ ಬಾಕಿಯಿರುವ ಕಡತಗಳನ್ನು ಮತ್ತು ಕಾಗದ ಪತ್ರಗಳನ್ನು ವಿಲೇವಾರಿ ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಸಿಬ್ಬಂದಿಯ ಮತ್ತು ಆಡಳಿತ ಸುಧಾರಣೆ ಇಲಾಖೆಯ ತಪಾಸಣಾ ವಿಭಾಗಕ್ಕೆ ವಹಿಸಲಾದ ಕರ್ತವ್ಯ ಮತ್ತು ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಸರ್ಕಾರದ ಎಲ್ಲಾ ಹಂತದಲ್ಲಿಯು ಪ್ರತಿ ತಿಂಗಳು ಕಡತ ವಿಲೇವಾರಿಯನ್ನು ಸಮೀಕ್ಷಿಸಲಾಗುತ್ತದೆ. ಪ್ರತಿ ತಿಂಗಳು ಜಿಲ್ಲಾಧಿಕಾರಿಗಳು, ಜಿಲ್ಲಾವಾರು ವರದಿಯನ್ನು ವಿಭಾಗಾಧಿಕಾರಿಗಳಿಗೆ ಸಮೀಕ್ಷೆಗಾಗಿ ಕಳುಹಿಸುತ್ತಾರೆ. ಇಲಾಖಾ ಮುಖ್ಯಸ್ಥರು ಸಹ ತಿಂಗಳುವಾರು ಪ್ರಗತಿ ವರದಿಯನ್ನು ಕೊಡುತ್ತಾರೆ. ಪ್ರತಿ ತಿಂಗಳು ಸಚಿವ ಸಂಪುಟವು ಸಹ ಕೆಲವು ಜಿಲ್ಲೆಗಳನ್ನು ಮತ್ತು ಇಲಾಖೆಗಳನ್ನು ಸಮೀಕ್ಷೆಗಾಗಿ ಆಯ್ಕೆ ಮಾಡುತ್ತದೆ. ಸಚಿವಾಲಯದ ಮಟ್ಟದಲ್ಲಿಯೂ ಎಲ್ಲಾ ಇಲಾಖೆಗಳಿಂದ ಮಾಹೆಯಾನ ಮಾಹಿತಿ ಕ್ರೋಢಿಕರಿಸಿ ಅವುಗಳನ್ನು ಸಚಿವ ಸಂಪುಟದ ಸಮೀಕ್ಷೆಗೆ ಸಲ್ಲಿಸಲಾಗುವುದು. ಇದಲ್ಲದೆ ಸಚಿವಾಲಯದ ಮಟ್ಟದಲ್ಲಿ ಮುಖ್ಯ ಕಾರ್ಯದರ್ಶಿಯವರು ಸಹ ಸಮೀಕ್ಷಿಸಿ ಹೆಚ್ಚು ಕಡತಗಳು ಬಾಕಿಯಿರುವ ಇಲಾಖೆಗಳಿಗೆ ಬಾಕಿಯನ್ನು ಕಡಿಮೆ ಮಾಡುವಂತೆ ನಿರ್ದೇಶಿಸುತ್ತಾರೆ.

ಕಾಗದ ಪತ್ರಗಳ ವಿಲೇವಾರಿಯ ಬಗ್ಗೆ ಸಚಿವಾಲಯದ ಇಲಾಖೆಗಳಲ್ಲಿ ''ಸಚಿವಾಲಯ ಕೈಪಿಡಿ''ಯಲ್ಲಿರುವ ಸೂಚನೆಗಳನ್ವಯ ಹಾಗೂ ಇತರೇ ಸರ್ಕಾರಿ ಕಛೇರಿಗಳಲ್ಲಿ ''ಕಛೇರಿ ಕಾರ್ಯವಿಧಾನ ಕೈಪಿಡಿ''ಯ ಕಂಡಿಕೆ 31ರಲ್ಲಿರುವ ಸೂಚನೆಗಳನ್ನು ಅನುಸರಿಸಲಾಗುವುದು.

ಇ) ಸಚಿವಾಲಯದ ಮತ್ತು ಕ್ಷೇತ್ರ ಇಲಾಖೆಗಳ ವಿವರವಾದ ಪರಿವೀಕ್ಷಣೆ (ಪೋಲೀಸ್ ಮತ್ತು ನ್ಯಾಯಾಂಗ ಇಲಾಖೆಯನ್ನು ಹೊರತುಪಡಿಸಿ) ಮತ್ತು ಸಚಿವಾಲಯ ಹಾಗೂ ಕ್ಷೇತ್ರ ಇಲಾಖೆಗಳ ಸಮಯ ಪ್ರಜ್ಞೆಯ ಅನಿರೀಕ್ಷಿತ ತಪಾಸಣೆ, ಇವು ತಪಾಸಣಾ ವಿಭಾಗಕ್ಕೆ ವಹಿಸಲಾದ ಕರ್ತವ್ಯಗಳು.

1999-2000ದ ವಾರ್ಷಿಕ ಕಾರ್ಯಕ್ರಮದಲ್ಲಿ ದಿನಾಂಕ 01-04-1999 ರಿಂದ 30-03-2000ದ ವರೆಗೆ ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ 62 ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡಿ ಕಡತ : ಸ್ವೀಕೃತಿಗಳ ಸಮೀಕ್ಷೆ ನಡೆಸಲಾಗಿದೆ.

ಕಾರಂಜಾ ನೀರಾವರಿ ಯೋಜನೆಯ ಮಾಹಿತಿ.

2215(2908)

ಶ್ರೀ ಗುಂಡಪ್ಪ ವಕೀಲ(ಔರಾದ): ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ ನೀರಾವರಿ ಯೋಜನೆಯು ಎಷ್ಟು ವಿಭಾಗಗಳಲ್ಲಿ ನಡೆಯುತ್ತಿದೆ, (ಈ ವಿಭಾಗಗಳ ವಿವರವಾದ ಮಾಹಿತಿಯನ್ನು ಒದಗಿಸುವುದು)

ಆ) ಕಾರಂಜಾ ನೀರಾವರಿ ಯೋಜನೆಯು ಎಷ್ಟು ಕಿ.ಮೀ. ಕಾಲುವೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ, ಎಷ್ಟು ಕಿ.ಮೀ. ಕಾಲುವೆ ಕಾಮಗಾರಿಯನ್ನು ಪೂರೈಸಲಾಗಿದೆ.

ಇ) ಈ ನೀರಾವರಿ ಯೋಜನೆಗೆ ಎಷ್ಟು ಹಣವನ್ನು ನಿಗಧಿಪಡಿಸಲಾಗಿತ್ತು ಎಷ್ಟು ಹಣ ಖರ್ಚು ಮಾಡಲಾಗಿದೆ. (ವಿವರ ಒದಗಿಸುವುದು)

ಶ್ರೀ ಎಚ್.ಕೆ.ಪಾಟೀಲ್ (ಬೃಹತ್ ನೀರಾವರಿ ಸಚಿವರು):

ಅ) ಮೂರು ವಿಭಾಗಗಳಲ್ಲಿ ನಡೆಯುತ್ತಿದೆ.

1. ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ.1 ಬೀದರ್: ಆಣೆಕಟ್ಟು ಪುನರ್ವಸತಿ ಮತ್ತು ಸೇತುವೆಗಳು. ಬಲದಂಡೆ ಕಾಲುವೆಯ ಕಿ.ಮೀ 87ರಿಂದ 90 ಮತ್ತು ಕಿ.ಮೀ 120 ರಿಂದ 131 ಮತ್ತು ಮುಂದಂಡೆ ಲಿಫ್ಟ್ ಕೆನಾಲ್ 0-24 ಕಿ.ಮೀ.

2. ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ.2.ಭಾಲ್ಕಿ : ಎಡದಂಡೆ ಕಾಲುವೆ ಒಟ್ಟು 31 ಕಿ.ಮೀ ಬಲದಂಡೆ ಕಾಲುವೆ ಕಿ.ಮೀ. 0 ರಿಂದ 39 ಕಿ.ಮೀ.